ದಿನಾಂಕ : 11.06.2025 ರಂದು ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.

**ಪಾಟೀ ಸವಾಲುಃ** ಅರ್ಜಿದಾರರ ಪರ **ಶ್ರೀ** ಬಿ.ಪಿ.ಎಸ್. **ವಕೀಲರಿಂದ,**

ಈ ಕೇಸ್ ನ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇರುತ್ತದೆ. ಈಗ ಸಾಕ್ಷಿಗೆ ನಿಪಿ.1 ಅನ್ನು ತೋರಿಸಿ ಅದರಲ್ಲಿ ಕೃತ್ಯ ಸ್ಥಳ ಜ್ಞಾನಅಮೃತ ಪ್ರೀ ಯುನಿವರ್ಸಿಟಿ ಹಾಸ್ಟೆಲ್, ಬಿಸೈಡ್ ಹೊಸಪೇಟೆ ಬೈಪಾಸ್ ರೋಡ್, ನಿಯರ್ ಗುಗ್ಗರಹಟ್ಟಿ, ಬಳ್ಳಾರಿ ಎಂದು ನಮೂದು ಇರುತ್ತದೆ ಎಂದರೆ ಸಾಕ್ಷಿಯು ನಿಪಿ.1 ಅನ್ನು ನೋಡಿ ಹೌದು ಎಂದು ನುಡಿಯುತ್ತಾರೆ. ನಾನು ಜ್ಞಾನಅಮೃತದಲ್ಲಿ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದೇನೆ. ನಾನು ಜ್ಞಾನಅಮೃತದಲ್ಲಿ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದೇನೆ ಎಂದು ತೋರಿಸಲು ಗುರುತಿನ ಕಾರ್ಡ್ ಅನ್ನು ಹಾಜರು ಮಾಡಿಲ್ಲ ಆದರೆ ಪತ್ರವನ್ನು ಹಾಜರು ಪಡಿಸಿರುತ್ತೇನೆ. ನಾನು ಶಂಕರಪ್ಪ ತಂದೆ ರಾಮಪ್ಪ ಎಂದು ತೋರಿಸಲು ನ್ಯಾಯಾಲಯಕ್ಕೆ ಆಧಾರ್ ಕಾರ್ಡ್ ಅನ್ನು ಸಲ್ಲಿಸಿರುವುದಿಲ್ಲ ಎಂದರೆ ಸಾಕ್ಷಿಯು ಇದೆ ಎಂದು ನುಡಿಯುತ್ತಾರೆ. ಜ್ಞಾನಅಮೃತ ಮತ್ತು ನನ್ನ ಅಜಾಗರೂಕತೆಯಿಂದ ಈ ಘಟನೆ ನಡೆಯಿತು ಆ ಕಾರಣಕ್ಕೆ ನಾವು ಪರಿಹಾರ ಕೊಡಲು ಬಾಧ್ಯಸ್ಥರು ಇರುತ್ತೇವೆ ಎಂದರೆ ಸರಿಯಲ್ಲ.

2. ನೀವು 2 ಮತ್ತು 3 ನೇ ಎದುರುದಾರರೊಂದಿಗೆ ಅಗ್ರಿಮೆಂಟ್ ಮಾಡಿಕೊಂಡಿರುತ್ತೀರಿ ಎಂದು ಬರೆದಿದ್ದು ಅದನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರಾ ಎಂದರೆ ಸಾಕ್ಷಿಯು ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಮುಖ್ಯವಿಚಾರಣೆ ಪ್ರಮಾಣ ಪತ್ರದ ಪ್ಯಾರಾ ನಂಬರ್. 9 ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ನನ್ನ ನಿರ್ದೇಶನದ ಪ್ರಕಾರ ಮೃತ

ಕೆಲಸ ಮಾಡುತ್ತಿದ್ದರು ಮತ್ತು ಕೆಲಸ ಮಾಡುವಾಗ ಅವರು ತೀರಿಕೊಂಡರು ಎಂದರೆ ಸರಿಯಲ್ಲ. ನನ್ನ ಹೊಣೆಗಾರಿಕೆಯನ್ನು ತಪ್ಪಿಸಿಕೊಳ್ಳಲು ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾವು ಭದ್ರತೆ ಸಲಕರಣೆಗಳನ್ನು ಮೃತನಿಗೆ ನಿಡದೇ ಇದ್ದಿದ್ದರಿಂದ ನಮ್ಮ ನಿರ್ಲಕ್ಷ್ಯತನದಿಂದ ಅಪಘಾತ ಸಂಭವಿಸಿ ಮೃತ ಪಟ್ಟಿರುತ್ತಾರೆ ಎಂದರೆ ಸಾಕ್ಷಿಯು ನಾವು ಕಂಟ್ರ್ಯಾಕ್ಟ್ ಕೊಟ್ಟು ಬಿಟ್ಟೇವು ನಮ್ಮ ಲೇಬರ್ ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ಆವರಣದಲ್ಲಿ ಕೆಲಸಗಾರರಿಗೆ ಅಪಘಾತ ಆದರೆ ಯಾರು ಹೊಣೆಗಾರಿಕೆ ಇರುತ್ತಾರೆ ಎಂಬ ಬಗ್ಗೆ ನೀವು ಏನಾದರೂ ಅಗ್ರಿಮೆಂಟ್ ಮಾಡಿಕೊಂಡಿರಾ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅದಕ್ಕೆ ಸಂಬಂಧಪಟ್ಟಂತೆ ನಾನು ಅಗ್ರಿಮೆಂಟ್ ಅಥವಾ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ ಕುಟುಂಬರಿಗೆ ಪರಿಹಾರ ಕೊಡಲು ಉಳಿದ ಎದುರುದಾರರೊಂದಿಗೆ ನಾನು ಕೊಡಲು ಬಾಧ್ಯಸ್ಥನು ಇರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ,**

*(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)*

ಓ ಹೇ ಕೇ ಸರಿ ಇದೆ

**2** ನೇ ಹೆ ಹಿ ಸಿವಿಲ್ ಜಡ್ಜ್, ಬಳ್ಳಾರಿ